ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಅನಧಿಕೃತ ಬಡಾವಣೆ/2022–23 ದಿನಾಂಕ: 21.09.2022

ಸಾರ್ವಜನಿಕ ಪ್ರಕಟಣೆ

ವಿಷಯ: ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳ ತೆರವುಗೊಳಿಸುವ ಬಗ್ಗೆ ನೋಟಿಸ್.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರನ್ವಯ ಸರ್ಕಾರದ ಆದೇಶ ಸಂ. ನಅಇ 118 ಬೆಂರೂಪ್ರಾ 2003, ದಿನಾಂಕ: 03.03.2006 ರಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು, ಸದರಿ ಕಾಯ್ದೆಯ ಕಲಂ 4 (ಸಿ) ರನ್ವಯ ಸರ್ಕಾರದ ಆದೇಶ ಸಂಖ್ಯೆ: ನಅಇ 31 ಬೆಂರೂಪ್ರಾ 2006 ದಿನಾಂಕ: 19.07.2006 ರಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹೊಸಕೋಟೆ ತಾಲ್ಲೂಕಿನ **ಹೊಸಕೋಟೆ ನಗರವನ್ನು ಒಳಗೊಂಡಂತೆ, ಕಸಬಾ, ಅನುಗೊಂಡನಹಳ್ಳಿ, ಜಡಿಗೇನಹಳ್ಳಿ, ನಂದಗುಡಿ ಹಾಗೂ ಸೂಲಿಬೆಲೆ ಹೋಬಳಿಗಳ ಒಟ್ಟು** 249 ಗ್ರಾಮಗಳು **ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ 16 ಗ್ರಾಮಗಳು ಸೇರಿ ಪ್ರಸ್ತುತ ಈ ಪ್ರಾಧಿಕಾರವು ಒಟ್ಟು 265 ಗ್ರಾಮಗಳನ್ನು** ಒಳಗೊಂಡಿದ್ದು, 475.48 ಚ.ಕಿ.ಮೀ. ವಿಸ್ತೀರ್ಣದ ವ್ಯಾಪ್ತಿ ಪ್ರದೇಶವನ್ನು ಹೊಂದಿರುತ್ತದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ದಿನಾಂಕ: 30.01.2018 ರಲ್ಲಿ ಮಹಾಯೋಜನೆ–2031 (ಅಂತಿಮ) ಅನ್ನು ಅನುಮೋದಿಸಲಾಗಿದ್ದು, ಸದರಿ ಮಹಾಯೋಜನೆಯಂತೆ ಭೂ ಉಪಯೋಗಗಳು ಹಾಗೂ ವಲಯ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಜಮೀನುಗಳಲ್ಲಿ / ನಿವೇಶನಗಳಲ್ಲಿ ಬಡಾವಣೆಗಳ ಅಭಿವೃದ್ಧಿ, ಕಟ್ಟಡಗಳ ನಿರ್ಮಾಣ, ಇತರೆ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ಮಹಾಯೋಜನೆ–2031 ಹಾಗೂ ವಲಯ ನಿಯಮಾವಳಿಗೆ ಅನುಗುಣವಾಗಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಕ್ರಯಕ್ಕೆ ಪಡೆಯುವ ಮೊದಲು ಪ್ರಾಧಿಕಾರದಿಂದ ಸದರಿ ಜಮೀನುಗಳಿಗೆ ಬಡಾವಣೆ ನಕ್ಷೆ ಅನುಮೋದನೆ ಪಡೆದಿರುವ ಬಗ್ಗೆ ಹಾಗೂ ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಪಡೆದಿರುವ ಕುರಿತು ಮತ್ತು ವಸತಿ ಸಮುಚ್ಚಯ ಕಟ್ಟಡಗಳಿಗೆ ನಕ್ಷೆ ಅನುಮೋದನೆ ಆಗಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಿನ್ಯಾಸ / ಬಡಾವಣೆಗಳಲ್ಲಿನ ನಿವೇಶನ ಮತ್ತು ವಸತಿ ಸಮುಚ್ಚಯ ಕಟ್ಟಡಗಳಲ್ಲಿನ ಅಪಾರ್ಟ್‌ಮೆಂಟ್ಸ್‌ಗಳನ್ನು ಖರೀದಿಸಬಾರದೆಂದು ಈ ಮೂಲಕ

ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ಈ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರದ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಸಹ ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಲಾದ ಬಡಾವಣೆಯಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ ಸಮುಚ್ಚಯ ಕಟ್ಟಡಗಳಲ್ಲಿನ ಅಪಾರ್ಟ್‌ಮೆಂಟ್‌ಗಳನ್ನು ಸಹ ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ /ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟ ಪಡಿಸಲಾಗಿದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರಾದಿಕಾರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಭಿವೃದ್ಧಿಗೊಂಡಿರುವ ಬಡಾವಣೆಗಳ ವಿವರಗಳು

ಕ್ರ.ಸಂ.	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗುಂ
1	2	3	4
ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ			
1	ಮಂಡೂರು	190, 191, 192, 193	16–00
2		128	05–00
3		153	05–07
4		63	02–09
5		12, 13, 14, 156, 157 & 158	13–00
6			
7	ಗುಂಡೂರು	65/2, 74	03–15
8	ಬೊಮ್ಮೇನಹಳ್ಳಿ	100, 172, 176, 177	09–20
9		101	
10		120, 149	01–18
11		96 ರ ಪೈಕಿ	02–20

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಅನಧಿಕೃತ ಬಡಾವಣೆ/2022–23 ದಿನಾಂಕ: 21.09.2022

12	ಕಮ್ಮಸಂದ್ರ	32/3, 55/2, 69, 82/3	06–05
13		50, 53	04–00
14		35 ರಲ್ಲಿ ಭಾಗಶಃ ಮತ್ತು 54	13–00
15		51	07–00
16		2	04–20
17		4	02–10
18		6	03–00
19	ಕೊಡಿಗೇಹಳ್ಳಿ	52/1ಎ, 52/1ಬಿ2	00–20
20		02, 41, 43	07–20
21		01	07–27
22		54	02–00
23		8, 9, 10	12–00
24		53, 58, 59, 60	01–20
25		47	02–00
26		48, 49, 50	10–00
27	ರಘುವನಹಳ್ಳಿ	20	28–00
28		14,15	06–00
29		16, 17, 18, 19	02–08
30		28	02–20
31	ಹುಸ್ಕೂರು	61 ರ ಪೈಕಿ	07–10
32		66 ರ ಪೈಕಿ	01–20
33		63 ರ ಪೈಕಿ	06–20
34		62 ರ ಪೈಕಿ	
35		71 ರ ಪೈಕಿ	
36		59 ರ ಪೈಕಿ	
37	ಲಘುಮೇನಹಳ್ಳಿ	9/2, 9/3, 25/1, 25/2	01–18
38		08	02–06 1/2

39	ಬೆಂಡಿಗಾನಹಳ್ಳಿ	51, 52	03–20
40		62, 63	01–20
ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ			
41	ಪೆತ್ತನಹಳ್ಳಿ	53	03–00
42	ಸರ್ಕಾರಿಗುಟ್ಟಹಳ್ಳಿ	51, 52	03–00
43	ಗಣಗಲು	92	07–00
44		22, 20	
45		58, 59, 60	10–00
46	ಹೊಸಕೋಟೆ	112, 113, 114, 115, 116, 117, 118, 165, 172, 238, 249, 289, 454	12–18
47	ಕಣ್ಣೂರಹಳ್ಳಿ	108, 112, 113, 114, 115,125/5	09–10
48	ದಂಡುಪಾಳ್ಯ	197, 198	02–08
ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ			
49	ಕಂಬಳೀಪುರ	133	03–00
ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ			
50	ಗುಳ್ಳಕಾಯಿಪುರ	4, 5, 6	12–20
51		2	03–10
52	ಕೋಟೂರು	61 ರ ಪೈಕಿ	03–13
53		162	01–15
54	ಮುತ್ತುಕದಹಳ್ಳಿ	13	01–20
55	ಬೆಳ್ಳಿಕೆರೆ	121	02–00
56		137	01–35
57		2, 3, 4	05–17
58		2	03–10
59		40	04–12
60		49	02–15
61		64	02–14
62	ಅಜ್ಜಗೊಂಡನಹಳ್ಳಿ	47, 48, 49, 50	06–15
63		52	02–05
64	ತಿಮ್ಮಂಡಹಳ್ಳಿ	3	02–00
65	ಹಾರೋಹಳ್ಳಿ	74, 75	06–29

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಅನಧಿಕೃತ ಬಡಾವಣೆ/2022–23 ದಿನಾಂಕ: 21.09.2022

66	ನಾಗನಾಯಕನಕೋಟೆ	26	04–19
67	ಮುತ್ಸಂದ್ರ	43, 44, 45, 46, 47, 48, 49, 50	02–15
68	ಬೈಲಹಳ್ಳಿ	28,29	03–00
69		156, 164	04–10
70	ದೇವಲಾಪುರ	30, 31, 32, 33	03–05
71	ಕೋಟೂರು	65, 66	10–23
ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ			
72	ಬಿಸನಹಳ್ಳಿ	30, 33	03–17
73	ಸೋಲೂರು	81	03–16
74	ತವಟಹಳ್ಳಿ	61, 62	04–00
75	ಅಟ್ಟೂರು	84, 85, 86	03–15
76	ವಾಗಟ	87	07–23
ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ			
77	ನಂದಗುಡಿ	7	03–25
78	ಹಿಂಡಿಗನಾಳ	224, 233, 235	02–30

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಭೂ ಮಾಲೀಕರು/ಅಭಿವೃದ್ಧಿದಾರರು ಕೆ.ಟಿ.ಸಿ.ಪಿ ಕಾಯ್ದೆ, 1961 ರ ಕಲಂ 17 ರಂತೆ ಈ ಕಛೇರಿಯಿಂದ ಅನುಮೋದನೆ ಪಡೆಯದೇ ವಿನ್ಯಾಸಗಳನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಬಾರದೆಂದೂ, ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಡಿಯಲ್ಲಿ ವಿನ್ಯಾಸದ ಮಾಲೀಕರು/ ಅಭಿವೃದ್ಧಿದಾರರು/ ಜಿ.ಪಿ.ಎ. ದಾರರು / ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಮೇಲ್ಕಂಡ ಜಮೀನುಗಳ ಭೂ ಮಾಲೀಕರು / ಅಭಿವೃದ್ಧಿದಾರರುಗಳ ಹೆಸರು / ವಿಳಾಸ ಲಭ್ಯವಿಲ್ಲದ ಕಾರಣ ಮೇಲ್ಕಂಡ ಜಮೀನುಗಳಲ್ಲಿ ಅನಧಿಕೃತವಾಗಿ ಅಭಿವೃದ್ಧಿ ಪಡಿಸಿರುವ ಜಮೀನುಗಳ ಮಾಲೀಕರು / ಜಿ.ಪಿ.ಎ ದಾರರು / ಅಭಿವೃದ್ಧಿದಾರರುಗಳಿಗೆ ಈ ಪ್ರಕಟಣೆಯನ್ನು ಕೆ.ಟಿ.ಸಿ.ಪಿ. ಕಾಯ್ದೆ ಕಲಂ 17(4) ರ ಅಡಿಯಲ್ಲಿ ನೀಡಲಾದ ನೋಟೀಸ್ ಎಂದು ತಿಳಿಯತಕ್ಕದ್ದು. ಈ ನೋಟಿಸಿಗೆ 15 ದಿನಗಳೊಳಗೆ ಲಿಖಿತ ರೂಪದ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿದೆ.

ಮುಂದುವರೆದು, ಸದರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಬಡಾವಣೆಗಳನ್ನು ತೆರವುಗೊಳಿಸಲು ಸಹ ತಿಳಿಸಲಾಗಿದೆ. ಇಲ್ಲವಾದಲ್ಲಿ, ಮುಂದಿನ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಈ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: www.hoskote.tpa.gov.in ರಲ್ಲಿಯೂ ಸಹ ಪ್ರಕಟಿಸಲಾಗಿದ್ದು, ಈ ವೆಬ್‌ಸೈಟ್ ನಲ್ಲಿಯೂ ಸಹ ಸಾರ್ವಜನಿಕರು ವೀಕ್ಷಿಸಬಹುದಾಗಿದೆ ಎಂದು ಈ ಮೂಲಕ ತಿಳಿಸಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.